RNU AIR DHARWAD

MAY 20, 2025

# AKASHAVANI - DHARWAD

# PRADESH SAMACHARA (KANNADA) 07.05 A.M.

**ಮುಖ್ಯಾಂಶಗಳು**

- **ವಿಜಯನಗರದ, ಹೊಸಪೇಟೆಯಲ್ಲಿ ಇಂದು,** ರಾಜ್ಯ ಸರ್ಕಾರದ, ದ್ವೈ ವಾರ್ಷಿಕ 'ಸಮರ್ಪಣೆ ಸಂಕಲ್ಪ ಸಮಾವೇಶ'.
- **ಉತ್ತರಕನ್ನಡ ಜಿಲ್ಲೆಯ,** ಮುಗುಳಿ ಅಪ್ಸರಕೊಂಡದಲ್ಲಿ, ಕಡಲ ಜೀವಿಗಳ ಸಂರಕ್ಷಿತ ಧಾಮಕ್ಕೆ, ವನ್ಯಜೀವಿ ಮಂಡಳಿ ಅನುಮೋದನೆ.
- **ಬೆಳಗಾವಿ ಜಿಲ್ಲೆ, ಗುಂಡೇನಟ್ಟಿಯಲ್ಲಿ,** ಅಪರೂಪದ 260 ತಳಿಯ ಭತ್ತಗಳನ್ನು ಸಂರಕ್ಷಿಸಿದ ಶಂಕರ ಲಂಗಟಿ.
- **ರಾಜ್ಯದ ಕರಾವಳಿ ಭಾಗದಲ್ಲಿ,** ಇಂದು ಮತ್ತು ನಾಳೆ, ಅಧಿಕ ಮಳೆ ನಿರೀಕ್ಷೆ; ರೆಡ್ ಅಲರ್ಟ್, ಘೋಷಣೆ.

**ರಾಜ್ಯ ಸರ್ಕಾರದ, ಎರಡು ವ ರ್ಗಳ ಸಾಧನೆಯ,** 'ಸಮರ್ಪಣಾ ಸಂಕಲ್ಪ ಸಮಾವೇಶ'ಕ್ಕೆ, ಉಕ್ಕಿನ ನಗರಿ ಹೊಸಪೇಟೆ, ಇಂದು ಸಕಲ ರೀತಿಯಲ್ಲಿ ಸಜ್ಜಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಅಂತಿಮ ಹಂತದ ಸಿದ್ಧತೆಗಳನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ವಿಜಯನಗರ ಅನೇಕ ಇತಿಹಾಸಗಳನ್ನು ತನ್ನ ಒಡಲೊಳಗೆ ಹುದುಗಿಸಿಟ್ಟುಕೊಂಡಿರುವ ಜಿಲ್ಲೆ. ಮಾಜಿ ಪ್ರಧಾನಮಂತ್ರಿ ಇಂದಿರಾ ಗಾಂಧಿಯವರು ಇಲ್ಲಿ ಭಾ ಣ ಮಾಡಿದ್ದಾರೆ. ಇಂದಿನ ಕಾರ್ಯಕ್ರಮದಲ್ಲಿ ಅವರ ಪುತ್ಥಳಿ ಅನಾವರಣಗೊಳ್ಳಲಿದೆ, ಎಂದರು. ವಿಜಯನಗರ ಜಿಲ್ಲೆಯ, 79 ಸಾವಿರ ರೈತರಿಗೆ ಪೋಡಿ ಮಾಡಿಕೊಟ್ಟು, ಪೋಡಿ ಮುಕ್ತ ಜಿಲ್ಲೆ ಎಂದು ಘೋಷಿಸಲಾಗಿದೆ. ಈ ಎರಡು ವ ರ್ಗಳ ಸಂಭ್ರಮ ಕೇವಲ ಆಚರಣೆಯಲ್ಲ; ನಮಗೆ ಅವಕಾಶ ಕೊಟ್ಟ ಜನರ ಋಣ ತೀರಿಸುವ ಸಂಕಲ್ಪ ಎಂದು, ಡಿ.ಕೆ. ಶಿವಕುಮಾರ ನುಡಿದರು.

<><><>

**ಸಮಾವೇಶದಲ್ಲಿ,** ಒಂದು ಲಕ್ಷದ ಹನ್ನೊಂದು ಸಾವಿರದ ನೂರ ಹನ್ನೊಂದು ಕಂದಾಯ ಗ್ರಾಮ ಹಕ್ಕು ಪತ್ರಗಳನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ವಿತರಿಸಲಿದ್ದಾರೆ.

<><><>

**ರಾಜ್ಯದ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿರುವ,** ಪ್ರಧಾನಮಂತ್ರಿ ಜನ್ ಔ ಧಿ ಕೇಂದ್ರಗಳನ್ನು ಮುಚ್ಚುವಂತೆ, ರಾಜ್ಯ ಸರ್ಕಾರ ಹೊರಡಿಸಿರುವ ಆದೇಶ, ಜನ ವಿರೋಧಿ ನಡೆ ಎಂದು, ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ ಟೀಕಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ತಿಳಿಸಿ, ಜನರು ತಮಗೆ ಸಕಾಲಕ್ಕೆ, ಕೈಗೆಟಕುವ ಬೆಲೆಗೆ, ಉತ್ತಮ ಗುಣಮಟ್ಟದ ಔ ಧಿ ಎಲ್ಲಿ ಸಿಗುತ್ತದೋ ಅಲ್ಲಿ ಖರೀದಿ ಮಾಡುತ್ತಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಸಿಕ್ಕರೆ ಅದನ್ನೇ ಪಡೆಯುತ್ತಾರೆ. ಅದಕ್ಕಾಗಿ ಜನ್ ಔ ಧಿ ಕೇಂದ್ರಗಳನ್ನು ಮುಚ್ಚುವ ಅವಶ್ಯಕತೆ ಏನಿದೆ? ಎಂದು, ಪ್ರಶ್ನಿಸಿದ್ದಾರೆ.

<><><>

**ಈ ಮಧ್ಯೆ, ಬಡ ಹಾಗೂ ಮಧ್ಯಮ ವರ್ಗದ ಜನರಿಗಾಗಿ,** ಸರ್ಕಾರಿ ಆಸ್ಪತ್ರೆಗಳಲ್ಲೂ, ಕೀಮೋಥೆರಪಿ ಸೌಲಭ್ಯಕ್ಕೆ, ಇದೇ 23 ರಂದು, ಮುಖ್ಯಮಂತ್ರಿ ಮೈಸೂರಿನಲ್ಲಿ, ಚಾಲನೆ ನೀಡಲಿದ್ದಾರೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ್, ಬೆಂಗಳೂರಿನಲ್ಲಿ ತಿಳಿಸಿದ್ದಾರೆ.

<><><>

**ಕೇಂದ್ರ ಸರ್ಕಾರ,** ರಾಜ್ಯದ ಪಾಲಿನ ಎಲ್ಲ ಅನುದಾನಗಳನ್ನು ಬಿಡುಗಡೆ ಮಾಡಿದ್ದು, ಮುಖ್ಯಮಂತ್ರಿಯವರು, ವೃಥಾ ಆರೋಪ ಮಾಡುತ್ತಿದ್ದಾರೆ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಹೇಳಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ, ಅಂಕಿ, ಸಂಖ್ಯೆಗಳ ಸಮೇತ ವಿವರವಾದ ಮಾಹಿತಿ ನೀಡಿರುವ ಸಚಿವರು, ಪ್ರಧಾನಮಂತ್ರಿ ಅಂತ್ಯೋದಯ ಅನ್ನ ಯೋಜನೆ, ಸ್ವಚ್ಛ ಭಾರತ ಮಿಷನ್, ಅಮೃತ್, ಪೋಷಣ್ ಹಾಗೂ ಸಮಗ್ರ ಶಿಕ್ಷಣ ಯೋಜನೆಗಳಡಿ, 5 ಸಾವಿರ ಕೋಟಿ ರೂಪಾಯಿ ಹಣ, ಕೇಂದ್ರದಿಂದ ರಾಜ್ಯಕ್ಕೆ ಬಿಡುಗಡೆಯಾಗಿದೆ. ನಿಗದಿತ ಕಾಲಮಿತಿಯೊಳಗೆ, ಸಮರ್ಪಕವಾಗಿ ಲಭ್ಯ ಹಣವನ್ನು, ಯೋಜನಾ ಬದ್ಧ ರೀತಿಯಲ್ಲಿ ಬಳಸಿಕೊಳ್ಳಲು, ರಾಜ್ಯ ಸರ್ಕಾರ ಮುಂದಾಗಲಿ ಎಂದಿದ್ದಾರೆ.

<><><>

**ರಾಜ್ಯ ಪೊಲೀಸ್ ಇಲಾಖೆ,** ಇದೇ ಮೊದಲ ಬಾರಿಗೆ ನೀಡುತ್ತಿರುವ, " ಪೊಲೀಸ್ ಮಹಾನಿರ್ದೇಶಕ – ಡಿ.ಜಿ.ಪಿ. ಪ್ರಶಂಸಾ ಪದಕ"ಕ್ಕೆ, ಗದಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಮುಳಗುಂದ ಪೊಲೀಸ್ ಠಾಣೆಯ ಇನ್ಸಪೆಕ್ಟರ್ ಸಂಗಮೇಶ ಶಿವಯೋಗಿ ಮತ್ತು ಮುಂಡರಗಿ ಠಾಣೆಯ ಪೇದೆ, ಜಾಫರ್ ಬಚ್ಚೇರಿ, ಆಯ್ಕೆಯಾಗಿದ್ದಾರೆ. ನಾಳೆ ಬೆಂಗಳೂರಿನಲ್ಲಿ, ಒಟ್ಟು ಇನ್ನೂರು ಜನ ಪೊಲೀಸ್ ಸಿಬ್ಬಂದಿಗೆ, ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ.

<><><>

**ಉತ್ತರಕನ್ನಡ ಜಿಲ್ಲೆ, ಹೊನ್ನಾವರ ತಾಲೂಕು,** ಮುಗುಳಿ – ಅಪ್ಸರಕೊಂಡದಲ್ಲಿ ರಾಜ್ಯದ, ಮೊಟ್ಟ ಮೊದಲ, ಕಡಲ ಜೀವಿಗಳ ಸಂರಕ್ಷಿತ ಧಾಮ, 'ಮರೈನ್ ಸ್ಯಾಂಕ್ಚುರಿ'ಗೆ, ರಾಜ್ಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ, ಅನುಮೋದಿಸಿದೆ. ಕಡಲ ಜೀವಿಗಳ ಸಂರಕ್ಷಿತ ಪ್ರದೇಶ ಯೋಜನೆಯಿಂದ, ಅಪರೂಪದ ತಿಮಿಂಗಿಲುಗಳು, ಡಾಲ್ಫಿನ್‌ಗಳು, ಸಮುದ್ರದ ಅಳಿವಿನಂಚಿನ ಮೀನುಗಳು ಹಾಗೂ ಆಮೆಗಳನ್ನು, ಮುಂದಿನ ಪೀಳಿಗೆಗಾಗಿ ಸಂರಕ್ಷಿಸಲು ಸಾಧ್ಯವಾಗಲಿದೆ. ಪ್ರದೇಶ ಸಮಾಚಾರಕ್ಕಾಗಿ, ಹೆಚ್ಚಿನ ಮಾಹಿತಿ ನೀಡಿದ್ದಾರೆ, ಹೊನ್ನಾವರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಿ.ಕೆ. ಯೋಗೀಶ

<><><>

**ದೇಶಾದ್ಯಂತ, 'ವಿಕಸಿತ ಕೃಷಿ ಸಂಕಲ್ಪ ಅಭಿಯಾನ'ವನ್ನು,** ಈ ತಿಂಗಳ 29 ರಿಂದ ಜೂನ್ 12ರ ವರೆಗೆ ಆಯೋಜಿಸಲಾಗುವುದು ಎಂದು, ಕೇಂದ್ರ ಕೃಷಿ ಖಾತೆ ಸಚಿವ ಶಿವರಾಜ್ ಸಿಂಗ್ ಚೌವ್ಹಾಣ್ ತಿಳಿಸಿದ್ದಾರೆ. ಹೊಸ ದಿಲ್ಲಿಯಲ್ಲಿ ಮಾತನಾಡಿದ ಸಚಿವರು, ಆಧುನಿಕ ಕೃಷಿ ತಂತ್ರಜ್ಞಾನ, ಕೃಷಿ ಯಾಂತ್ರಿಕತೆ ಮತ್ತು ಹೊಸ ತಳಿಗಳ ಬಗ್ಗೆ, ರೈತರಲ್ಲಿ ಜಾಗೃತಿ ಮೂಡಿಸುವುದು ಈ ಅಭಿಯಾನದ ಗುರಿಯಾಗಿದೆ. ದೇಶಾದ್ಯಂತ 723 ಜಿಲ್ಲೆಗಳಲ್ಲಿ ಅಭಿಯಾನ ನಡೆಯಲಿದ್ದು, ಒಂದೂವರೆ ಕೋಟಿ ರೈತರನ್ನು ತಲುಪಲಿದೆ. ತಜ್ಞರ ತಂಡ, 65 ಸಾವಿರ ಹಳ್ಳಿಗಳಿಗೆ ಭೇಟಿ ನೀಡಲಿದೆ, ಎಂದರು.

<><><>

**ಬೆಳಗಾವಿ ಜಿಲ್ಲೆ, ಖಾನಾಪುರ ತಾಲೂಕು,** ಗುಂಡೇನಟ್ಟಿ ಗ್ರಾಮದ ಪ್ರಯೋಗಶಿಲ ಕೃಷಿಕ ಡಾಕ್ಟರ್ ಶಂಕರ ಹನುಮಂತ ಲಂಗಟಿ, ತಮ್ಮ 12 ಎಕರೆ ಭೂಮಿಯಲ್ಲಿ, 260 ಬಗೆಯ ಅಪರೂಪದ ತಳಿಯ ಭತ್ತಗಳನ್ನು ಬೆಳೆಸಿ, ಉಳಿಸಿದ್ದಾರೆ. ಲಂಗಟಿ ಅವರು, ತಮ್ಮ ಹೊಲದಲ್ಲಿ ಗೊದಾಮು ಹಾಗೂ ಮಾರಾಟ ಕೇಂದ್ರ ಸಹ ಸ್ಥಾಪಿಸಿದ್ದಾರೆ. ಅಧಿಕ ಇಳುವರಿ ಹಾಗೂ ನಿರಂತರವಾಗಿ ಮಣ್ಣಿನ ಫಲವತ್ತತೆ ಕಾಪಾಡಿಕೊಳ್ಳಲು ಜೀವಾಮೃತ ಹಾಗೂ ಹಸಿರು ಗೊಬ್ಬರ ಬಳಸಿ, ಸಾವಯವ ಕೃಷಿಯಲ್ಲಿ ಮಾದರಿಗಳನ್ನು ಸೃಷ್ಟಿಸಿದ್ದಾರೆ. ಜಾಗೃತಿ ಸಂಸ್ಥೆಯ ಶಾರದಾ ಗೋಪಾಲ ದಾಬಡೆ ಹಾಗೂ ಗ್ರೀನ್ ಫೌಂಡೇಶನ್‌ನ ಶಿವರಾಜ ಹುನುಗುಂದ ಅವರ ಸಹಕಾರದಲ್ಲಿ, ಆಕಾಶವಾಣಿಯ ಕೃಷಿ ಸುದ್ದಿಗಳನ್ನು ನಿರಂತರವಾಗಿ ಆಲಿಸುತ್ತಾ, ಶಂಕರ ಲಂಗಟಿ ಅವರು ಈ ಸಾಧನೆಗೈಯ್ಯಲು ಸಾಧ್ಯವಾಗಿದೆ, ಎನ್ನುತ್ತಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

**ಯುನೆಸ್ಕೋ ವಿಶ್ವ ಪಾರಂಪರಿಕ ತಾಣ,** ವಿಜಯನಗರ ಜಿಲ್ಲೆಯ ಹಂಪಿಯಲ್ಲಿ, ರಾಜ್ಯದ ಎರಡನೇ ಅತಿದೊಡ್ಡ ಹಾಗೂ ಕಲ್ಯಾಣ ಕರ್ನಾಟಕ ಭಾಗದ, ಅತ್ಯಾಧುನಿಕ ತಾರಾಲಯ ಹಾಗೂ ವಿಜ್ಞಾನ ಕೇಂದ್ರವನ್ನು ನಿರ್ಮಿಸಲಾಗುವುದು ಎಂದು, ವಿಜ್ಞಾನ ಹಾಗೂ ತಂತ್ರಜ್ಞಾನ ಖಾತೆ ಸಚಿವ, ಎನ್.ಎಸ್. ಬೋಸರಾಜು ತಿಳಿಸಿದ್ದಾರೆ. ಹಂಪಿ ಬಳಿ ಕಮಲಾಪುರದಲ್ಲಿ, ವಿಜ್ಞಾನ ಕೇಂದ್ರ ಮತ್ತು ತಾರಾಲಯ ನಿರ್ಮಾಣಕ್ಕೆ, ನಿಗದಿಯಾದ 10 ಎಕರೆ ಜಾಗೆಯನ್ನು, ಪರಿಶೀಲಿಸಿದರು. ಮುಖ್ಯಮಂತ್ರಿಯವರ ಆಶಯದಂತೆ, ಪ್ರತಿ ಜಿಲ್ಲೆಯಲ್ಲೂ ವಿಜ್ಞಾನ ಕೇಂದ್ರ ಹಾಗೂ ತಾರಾಲಯ ನಿರ್ಮಿಸಲಾಗುತ್ತಿದೆ. ಹಂಪಿಯಲ್ಲಿ ಅತ್ಯುತ್ತಮ ತಾರಾಲಯ ಸ್ಥಾಪನೆ ತಮ್ಮ ಸಂಕಲ್ಪವಾಗಿದೆ, ಎಂದರು.

<><><>

**ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ** ಕೇಂದ್ರದ ಮುನ್ಸೂಚನೆ ಪ್ರಕಾರ, ರಾಜ್ಯದ ಕರಾವಳಿ ಭಾಗದಲ್ಲಿ, ರಭಸದ ಮಳೆಯಾಗುವ ನಿರೀಕ್ಷೆ ಹಿನ್ನೆಲೆ, ಇಂದು ಮತ್ತು ನಾಳೆ, ರೆಡ್ ಅಲರ್ಟ್ ಪ್ರಕಟಿಸಲಾಗಿದೆ. ಉತ್ತರಕನ್ನಡ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಮಾಹಿತಿ ನೀಡಿ, ಸಾರ್ವಜನಿಕರು ತಗ್ಗು ಪ್ರದೇಶ, ಕೆರೆ, ನದಿ ತೀರ ಹಾಗೂ ಸಮುದ್ರ ತೀರಕ್ಕೆ ತೆರಳದಂತೆ, ಮೀನುಗಾರರು ಮೀನುಗಾರಿಕೆಗೆ ತೆರಳದಂತೆ, ಮುನ್ನೆಚ್ಚರಿಕೆ ನೀಡಿದ್ದಾರೆ. ಸುರಕ್ಷಿತ ಸ್ಥಳಗಳಿಗೆ ಮುಂಚೆಯೇ ತೆರಳಿ, ತಹಸೀಲ್ದಾರರು ಗುರುತಿಸಿದ ಕಾಳಜಿ ಕೇಂದ್ರದಲ್ಲಿ ಕಡ್ಡಾಯವಾಗಿ ಆಶ್ರಯ ಪಡೆಯುವಂತೆ, ಗ್ರಾಮೀಣ ಪ್ರದೇಶದಲ್ಲಿ ಕಾಲುಸಂಕ, ಕಿರು ಸೇತುವೆ ದಾಟುವ ಮುನ್ನ ಎಚ್ಚರಿಕೆ ವಹಿಸುವಂತೆ ತಿಳಿಸಿದ್ದಾರೆ.

<><><>

**ಅಂತಾರಾಷ್ಟ್ರೀಯ ಟೇಕ್ವಾಂಡೋ** ಚಾಂಪಿಯನ್‌ಶಿಪ್‌ನಲ್ಲಿ, ಬೆಂಗಳೂರಿನ ಎಂ.ಎಸ್. ರಾಮಯ್ಯ ಆನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರಥಮ ವರ್ಷದ ಕಾನೂನು ಪದವಿ ವಿದ್ಯಾರ್ಥಿನಿ, ಹಾಸಿನಿ ಗೌಡ, ನಾಲ್ಕು ಚಿನ್ನದ ಪದಕಗಳನ್ನು ಗೆದ್ದಿದ್ದಾರೆ. ಮಲೇಷಿಯಾದ ಷಾ ಆಲಂ, ಪ್ಯಾನಾಸಾನಿಕ್ ನ್ಯಾಷನಲ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಜರುಗಿದ ಪಂದ್ಯದಲ್ಲಿ, 17 ರಿಂದ 18 ವರ್ಷದೊಳಗಿನ ವಯೋಮಿತಿಯ, 55 ಕಿಲೋ ವಿಭಾಗದಲ್ಲಿ, ಪದಕ ಗಳಿಸಿದ್ದಾರೆ. ಅಂತಾರಾಷ್ಟ್ರೀಯ ಟೇಕ್ವಾಂಡೋ

ಚಾಂಪಿಯನ್‌ಶಿಪ್‌ನಲ್ಲಿ, ಭಾರತ, ಇಂಡೋನೇಷ್ಯಾ, ಬಾಂಗ್ಲಾದೇಶ, ಮ್ಯಾನ್ಮಾರ್, ಸಿರಿಯಾ ಹಾಗೂ ಮಲೇಷಿಯಾ ಸೇರಿ, ವಿವಿಧ ರಾಷ್ಟ್ರಗಳ ಸಾವಿರದ ಐನೂರಕ್ಕೂ ಹೆಚ್ಚು ಸ್ಪರ್ಧಿಗಳು ಪಾಲ್ಗೊಂಡಿದ್ದರು. ಭಾರತದಿಂದ 65 ಕ್ರೀಡಾಪಟುಗಳು ಭಾಗವಹಿಸಿದ್ದರು.

<><><>

**ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ,** ನಾರಾಯಣಪುರ ಬಲದಂಡೆ ಕಾಲುವೆ, ಅಚ್ಚುಕಟ್ಟು ಪ್ರದೇಶದ ನೀರು ಬಳಕೆದಾರರ ಸಹಕಾರ ಸಂಘದ ರೈತರಿಗಾಗಿ, ಕಾರ್ಯಾಗಾರ ಜರುಗಿತು.

<><><>

**ಬಳ್ಳಾರಿ ಜಿಲ್ಲೆ, ಕಂಪ್ಲಿ ಬಳಿ,** ತುಂಗಭದ್ರಾ ನದಿಯಲ್ಲಿ ಈಜಲು ತೆರಳಿದ್ದ, ಕೊಪ್ಪಳ ಜಿಲ್ಲೆ ಗಂಗಾವತಿ ಮೂಲದ, ಪವನ್ ಮತ್ತು ಗೌತಮ್, ಸಾವನ್ನಪ್ಪಿದ್ದಾರೆ.

<><><>

**ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ,** 'ಆಪರೇಷನ್ ಅಭ್ಯಾಸ್' ಅಣಕು ಕಾರ್ಯಾಚರಣೆ, ವಿವಿಧ ಇಲಾಖೆಗಳ ಸಹಭಾಗಿತ್ವದಲ್ಲಿ ನಡೆಯಿತು.

<><><>

- **ವಿಜಯನಗರದ, ಹೊಸಪೇಟೆಯಲ್ಲಿ ಇಂದು,** ರಾಜ್ಯ ಸರ್ಕಾರದ, ದ್ವೈ ವಾರ್ಷಿಕ 'ಸಮರ್ಪಣೆ ಸಂಕಲ್ಪ ಸಮಾವೇಶ'.
- **ಉತ್ತರಕನ್ನಡ ಜಿಲ್ಲೆಯ,** ಮುಗುಳಿ ಅಪ್ಸರಕೊಂಡದಲ್ಲಿ, ಕಡಲ ಜೀವಿಗಳ ಸಂರಕ್ಷಿತ ಧಾಮಕ್ಕೆ, ವನ್ಯಜೀವಿ ಮಂಡಳಿ ಅನುಮೋದನೆ.
- **ಬೆಳಗಾವಿ ಜಿಲ್ಲೆ, ಗುಂಡೇನಟ್ಟಿಯಲ್ಲಿ,** ಅಪರೂಪದ 260 ತಳಿಯ ಭತ್ತಗಳನ್ನು ಸಂರಕ್ಷಿಸಿದ ಶಂಕರ ಲಂಗಟಿ.
- **ರಾಜ್ಯದ ಕರಾವಳಿ ಭಾಗದಲ್ಲಿ,** ಇಂದು ಮತ್ತು ನಾಳೆ, ಅಧಿಕ ಮಳೆ ನಿರೀಕ್ಷೆ; ರೆಡ್ ಅಲರ್ಟ್, ಘೋಷಣೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>